ಆಂದೋಲನ

# ರಾಷ್ಟ್ರಮಟ್ಟದ ವಿಚಾರಸಂಕಿರಣಕ್ಕೆ ಚಾಲನೆ



ಮೈಸೂರು: ಪ್ರಸ್ತುತ ಇಮೇಜ್ ಪ್ರೊಸೆಸ್ಸಿಂಗ್ ತಂತ್ರಜ್ಞಾನವು ಆಟೋಮೊಬೈಲ್ ಕ್ಷೇತ್ರ ಸೇರಿದಂತೆ ವಿದ್ಯುನ್ಮಾನ ಮತ್ತು ಸಂವಹನ, ಸಿವಿಲ್ ವಿಭಾಗಗಳಲ್ಲಿ ಅಲ್ಲದೆ ಇತರೆ ಕ್ಷೇತ್ರಗಳಲ್ಲಿಯೂ ತ್ವರಿತವಾಗಿ ಬಳಕೆಯಾಗುತ್ತಿದ್ದು, ಈ ಕುರಿತು ಹೆಚ್ಚಿನ ಸಂಶೋಧನೆ ನಡೆಸುವ ಬಗ್ಗೆ ತಾಂತ್ರಿಕ ವಿಭಾಗದ ವಿದ್ಯಾರ್ಥಿಗಳು ಒತ್ತು ನೀಡಬೇಕು ಎಂದು ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್‌ನ ಕಾರ್ಯಕ್ರಮ ವ್ಯವಸ್ಥಾಪಕ ಡಾ.ಟಿ.ಶ್ರೀಕಾಂತ್ ತಿಳಿಸಿದರು.

ನಗರದ ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನಾ ಮಂಡಳಿ ಸಹಯೋಗದಲ್ಲಿ ಆಯೋಜಿಸಿದ್ದ 'ಅಪ್ಲಿಕೇಷನ್ ಆಫ್ ಇಮೇಜ್ ಪ್ರೊಸೆಸಿಂಗ್ ಟೆಕ್ನಿಕ್ ಇನ್ ದಿ ಫೀಲ್ಡ್ ಆಫ್ ಎಲೆಕ್ಟ್ರಾನಿಕ್ಸ್-ಕಮ್ಯೂನಿಕೇಶನ್ ಅಂಡ್ ಸಿವಿಲ್ ಇಂಜಿನಿಯರಿಂಗ್' ವಿಷಯ ಕುರಿತ ಮೂರು ದಿನಗಳ ರಾಷ್ಟ್ರಮಟ್ಟದ ವಿಚಾರಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜು ಪ್ರಾಂಶುಪಾಲ ಡಾ.ಎ.ಕೆ. ಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಸೂರತ್ಕಲ್‌ನ ಎನ್‌ಐಟಿಕೆ ಪ್ರಾಧ್ಯಾಪಕ ಡಾ.ದ್ವಾರಕೀಶ್, ಸಹಾಯಕ ಪ್ರಾಧ್ಯಾಪಕ ಡಾ.ವಿವೇಕ್ ಪದ್ಮನಾಭ, ಐಐಟಿ ಗುವಾಹಟಿ ಮತ್ತು ಇನ್‌ಫೋಸಿಸ್‌ನ ವಿಶೇಷ ಅಧ್ಯಯನ ವಿಭಾಗದ ಡಾ.ಅನಿತಾ ರಾಘವೇಂದ್ರ, ಐಕ್ಯೂಎಸಿ ನಿರ್ದೇಶಕ ಡಾ.ಎಲ್. ಬಸವರಾಜ್, ಡೀನ್ ಡಾ.ಎಸ್.ಆರ್. ಭಾಗ್ಯಶ್ರೀ, ಡಾ.ಎಂ.ಎಸ್.ಗೋವಿಂದೇಗೌಡ, ಡಾ.ಎಲ್.ಯತೀಶ, ಪ್ರೊ.ಮನು ವಿಜಯ್, ಮುಖ್ಯ ಸಂಯೋಜಕರಾದ ಪ್ರೊ.ಪಿ.ಪುನೀತ್, ಪ್ರೊ.ಶ್ರೀವತ್ಸ, ಪ್ರೊ.ಜಸ್ಲೀನ್ ಇತರರು ಹಾಜರಿದ್ದರು.

Main Edition
Nov 8, 2023 Page No. 9
Powered by : eReleGo.com